**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 76/2020**

**ಚಾ.ಸಾಃ 12, ಫ್ರಾ.ಸಾಃ 05**

| | |
|---|---|
| ಸಾಕ್ಷಿದಾರನ ಹೆಸರು | ಸಾವಿತ್ರಿ ಹೆಗಡೆ |
| ಗಂಡನ ಹೆಸರು | ರಮೇಶ ಹೆಗಡೆ |
| ವಯಸ್ಸು | 53 ವರ್ಷಗಳು |
| ಉದ್ಯೋಗ | ಪ್ರಾಥಮಿಕ ಶಾಲಾ ಶಿಕ್ಷಕಿ, ಅರೆಅಂಗಡಿ ಶಾಲೆ |
| ವಾಸ್ತವ್ಯ | ಬಾದಳ್ಳಿ, ನವಿಲಗೋಣ |

**ಸಾಕ್ಷಿಯನ್ನು ದಿನಾಂಕಃ 19-05-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಶಾಲಾ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದು ನವಿಲಗೋಣದ ಬಾದಳ್ಳಿಯಲ್ಲಿ ನಮ್ಮ ವಾಸದ ಮನೆ ಇದ್ದು ಅಲ್ಲಿ ನಾನು ಮತ್ತು ನನ್ನ ಗಂಡ ವಾಸ ಮಾಡುತ್ತಿದ್ದೇವೆ. ನನ್ನ ಇಬ್ಬರು ಮಕ್ಕಳ ಪೈಕಿ ಒಬ್ಬ ಹೈದರಾಬಾದಿನಲ್ಲಿ ಕೆಲಸ ಮಾಡುತ್ತಿದ್ದು ಮತ್ತೊಬ್ಬ ಮುಂಡಗೋಡದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನ್ನ ಗಂಡ ಹಳದೀಪುರದ ಅಂಚೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ದಿನಾಂಕ 07-03-2020 ರಂದು ರಾತ್ರಿ 07-03 ರ ಸಮಯಕ್ಕೆ ನಮ್ಮ ವಯಕ್ತಿಕ ಕೆಲಸದ ಮೇಲೆ ಬೆಂಗಳೂರಿಗೆ ಹೊರಟಿದ್ದು ಹೋಗುವ ಪೂರ್ವದಲ್ಲಿ ನಮ್ಮ ಮನೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಿ ಮುಂದಿನ ಬಾಗಿಲಿಗೆ ಬೀಗವನ್ನು ಹಾಕಿ ಹೋಗಿದ್ದೆವು.

ನಾವು ದಿನಾಂಕ 09-03-2020 ರಂದು ಬೆಳಿಗ್ಗೆ 07-30 ರ ಸಮಯಕ್ಕೆ ವಾಪಸ್ಸು ಮನೆಯ ಬಳಿ ಬಂದು ನೋಡಲಾಗಿ ಮುಂದಿನ ಬಾಗಿಲು ಬೀಗ ಹಾಕಿದ ಸ್ಥಿತಿಯಲ್ಲಿ ಇತ್ತು. ಆದರೆ ಹಿಂದಿನ ಬಾಗಿಲು ತೆರೆದಿತ್ತು. ಮನೆಯ ಬೀಗವನ್ನು ತೆರೆದು ನೋಡಲಾಗಿ ಎಲ್ಲಾ ಗೊದ್ರೇಜ್ ಬೀರುಗಳ ಬಾಗಿಲುಗಳನ್ನು ತೆರೆಯಲಾಗಿತ್ತು. ಮಾಳಿಗೆಯ ಮೇಲೆ ಹೋಗಿ ನೋಡಲಾಗಿ ಅಲ್ಲಿದ್ದ ಸಿಮೆಂಟ್ ಬಾಗಿಲು ಮತ್ತು ಕಬ್ಬಿಣದ ಬಾಗಿಲುಗಳನ್ನು ಒಡೆಯಲಾಗಿತ್ತು. ಕೆಳಗೆ ಬಂದು ನೋಡಲಾಗಿ ನನ್ನ ಗೊದ್ರೇಜಿನ ಲಾಕರಿನಲ್ಲಿ ಡಬ್ಬಿಗಳಲ್ಲಿ ಹಾಕಿ ಇಟ್ಟಿದ್ದ ಆಭರಣಗಳು ಇರಲಿಲ್ಲ. ನಾನು ಲಾಕರಿನಲ್ಲಿ 1) ಒಂದು ಲಾಕೇಟ್ ಸಮೇತ ಇದ್ದ ಎರಡುಎಳೆ ಕರಿಮಣಿ ಬಂಗಾರದ ಸರ, 2) ಒಂದು ಬಂಗಾರದ ನೆಕ್ಲೇಸ್, 3) ಚಿನ್ನದಲ್ಲಿ ಕಟ್ಟಿಸಿದ ಮುತ್ತಿನ ಸರ, 4) ಒಂದು ಬಂಗಾರದ ದೊಡ್ಡ ಹರಳಿನ ಉಂಗುರ, 5) ಒಂದು ಬಂಗಾರದ ಚಿಕ್ಕ ಹರಳಿನ ಉಂಗುರ, 6) ಒಂದು ಬಂಗಾರದ ಪವಿತ್ರ ಉಂಗುರ, 7) ಒಂದು ಜೊತೆ ಹರಳಿನ ಕುಡುಕು, ಮೇಗಾ ಮತ್ತು ಮಾಟಿ, 8) 8 ಅಷ್ಟಪಟ್ಟಿ ಗುಂಡುಗಳು, 9) ಒಂದು ಬಂಗಾರದ ಲಾಕೇಟು, 10) ಎರಡು ಜೊತೆ ಬಂಗಾರದ ಕಿವಿಯೋಲೆ, 11) ಒಂದು ಜೊತೆ ಬಂಗಾರದ ರಿಂಗುಗಳು, 12) 2 ಜೊತೆ ಬಂಗಾರದ ಪಾಟ್ಲಿ ಬಳೆಗಳನ್ನು ಇಟ್ಟಿದ್ದೆ. ಎಲ್ಲಾ ಆಭರಣಗಳು ಕಳ್ಳತನ ಆಗಿದ್ದವು. ಕಳ್ಳತನದ ಬಗ್ಗೆ ಪೋಲಿಸರಿಗೆ ಮಾಹಿತಿಯನ್ನು ತಿಳಿಸಿರುತ್ತೇವೆ.

ಪೋಲಿಸರು ಸ್ಥಳಕ್ಕೆ ಶ್ವಾನದಳ ಮತ್ತು ಬೆರಳಚ್ಚು ತಜ್ಞರನ್ನು ಕರೆಸಿದ್ದರು. ನಮ್ಮ ಮನೆಯಲ್ಲಿ ಆದ ಕಳ್ಳತನದ ಬಗ್ಗೆ ಪೋಲಿಸರು ನನ್ನನ್ನು ವಿಚಾರಿಸಿದ್ದು ನಾನು ಅವರಿಗೆ ಹೇಳಿಕೆ ನೀಡಿರುತ್ತೇನೆ.

ದಿನಾಂಕ 04-08-2020 ರಂದು ನಾವು ಮನೆಯಲ್ಲಿದ್ದಾಗ ಪೋಲಿಸರು ಇಬ್ಬರು ಆರೋಪಿಗಳನ್ನು ನಮ್ಮ ಮನೆಯ ಬಳಿ ಕರೆತಂದಿದ್ದರು. ನಾವು ಸದರಿ ವ್ಯಕ್ತಿಗಳನ್ನು ಕೇಳಿದಾಗ ಅವರು ಯಾವ ರೀತಿ ಕಳ್ಳತನ ಮಾಡಿದೆವು ಎನ್ನುವುದನ್ನು ತೋರಿಸಿರುತ್ತಾರೆ. ಸದರಿ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ 1 ನೇ ಆರೋಪಿ ಹಾಜರಿದ್ದು ಆತನನ್ನು ಸಾಕ್ಷಿ ಗುರುತಿಸಿರುತ್ತಾರೆ. 2 ನೇ ಆರೋಪಿ ಗೈರು ಹಾಜರಿದ್ದು ಆತನ ಗುರುತಿಸುವಿಕೆಯನ್ನು ತಕರಾರು ಮಾಡುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ದಿನಾಂಕ 05-08-2020 ರಂದು ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿದ್ದರು. ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಆಭರಣಗಳ ಪೈಕಿ ಎರಡು ಜೊತೆ ಪಾಟ್ಲಿ ಬಳೆಗಳನ್ನು ಬಿಟ್ಟು ಉಳಿದ ಎಲ್ಲಾ ಆಭರಣಗಳನ್ನು ತೋರಿಸಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಆಭರಣಗಳು ಬೆಲೆಬಾಳುವ ಪೆಟ್ಟಿಗೆಯಲ್ಲಿ ಇರುತ್ತವೆ. ಅವುಗಳನ್ನು ಈಗಾಗಲೇ ಮುಮಾ-1 ರಿಂದ 12 ಎಂದು ಗುರುತಿಸಲಾಗಿರುತ್ತದೆ. ಸದರಿ ಆಭರಣಗಳ ಗುರುತಿಸುವಿಕೆಯನ್ನು ತಕರಾರು ಮಾಡುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನಾವು ತೆರೆದಿದ್ದ ಹಿಂದಿನ ಬಾಗಿಲಿನಿಂದ ಮನೆಯ ಒಳಗೆ ಪ್ರವೇಶಿಸಿರುವುದಿಲ್ಲ. ಮುಂದಿನ ಬಾಗಿಲಿನ ಬೀಗವನ್ನು ತೆರೆದು ಮನೆಯನ್ನು ಪ್ರವೇಶಿಸಿರುತ್ತೇವೆ. ಆಭರಣಗಳನ್ನು ಇಟ್ಟಿದ್ದ ಡಬ್ಬಿಗಳು ನೆಲದ ಮೇಲೆ ಬಿದ್ದಿದ್ದವು. ಪೋಲಿಸರು ಬಂದಾಗ ಅವುಗಳನ್ನು ತೋರಿಸಿರುತ್ತೇನೆ. ಆಭರಣಗಳು ಇದ್ದ ಎಲ್ಲಾ ಡಬ್ಬಿಗಳನ್ನು ಒಂದೇ ಗೊದ್ರೇಜ್ ಬೀರುವಿನಲ್ಲಿ ಇಟ್ಟಿದ್ದೆ. ಪೋಲಿಸರಿಗೆ ಹೇಳಿಕೆಯನ್ನು ಹೊನ್ನಾವರದಲ್ಲಿ ನೀಡಿರುತ್ತೇನೆ.

ದಿನಾಂಕ 04-08-2020 ರಂದು ಪೋಲಿಸರು ಆರೋಪಿಗಳನ್ನು ಮನೆಯ ಬಳಿ ಕರೆತಂದಾಗ ನಾನು ಮತ್ತು ನನ್ನ ಗಂಡ ಮನೆಯಲ್ಲಿ ಇದ್ದೆವು. ಮನೆಗೆ ಬರುವ ಮೊದಲು ಪೋಲಿಸರು ನೀವು ಮನೆಯಲ್ಲಿ ಇರುತ್ತೀರಾ ಎಂದು ನಮ್ಮನ್ನು ಕೇಳಿರುತ್ತಾರೆ. ಪೋಲಿಸರು ಇವರು ಕಳ್ಳತನ ಮಾಡಿದ್ದಾರೆ ಎಂದು ಹೇಳಿದ್ದರಿಂದ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ನಮ್ಮ ಮನೆಯಲ್ಲಿ ಆಗಿರುವ ಕಳ್ಳತನಕ್ಕೆ ಮತ್ತು ಆರೋಪಿಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**